ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572 103

ಸಂಖ್ಯೆ :ತುವಿ:ವಿ.ವಿ.ಪ/ಸಿಂ.ವಿ/2024-25 ದಿನಾಂಕ: 30.08.2024

ಇವರಿಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯರೆ,

**ವಿಷಯ: 2024-25ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳನ್ನು ಕಳುಹಿಸುತ್ತಿರುವ ಕುರಿತು**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯನ್ನು **ದಿನಾಂಕ: 04.09.2024ರ ಬುಧವಾರ ಬೆಳಿಗ್ಗೆ 10:30 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು ಇಲ್ಲಿ** ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಲಿರುವ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)

**ಅಡಕ:** ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳು

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

**ಸಭಾ ಸಂಖ್ಯೆ: ಸಾ.ವಿ.ಪ-01 ದಿನಾಂಕ: 04.09.2024 ಸಮಯ: ಬೆಳಿಗ್ಗೆ: 10.30**

**2024-25ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳು**

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| **ದಿನಾಂಕ: 21.02.2024, ದಿನಾಂಕ: 13.03.2024, 15.06.2024 ಮತ್ತು 05.08.2024 ರಂದು ಅನುಕ್ರಮವಾಗಿ ನಡೆದ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ, ಮೂರನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆ, ನಾಲ್ಕನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ಐದನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳ ದೃಢೀಕರಣ.** | | | |
| | | **ಶೈಕ್ಷಣಿಕ ವಿಭಾಗ** | |
| 1. | 2024-25.ಸಾ.ವಿ.ಪ-01 ಶೈ.ವಿ-01 | ಸ್ನಾತಕೋತ್ತರ ಎಲ್.ಎಲ್.ಎಂ ಕೋರ್ಸ್‌ನ ಚೇತನ್ ಕುಮಾರ್ ಎಲ್ ಮತ್ತು ತಿಪ್ಪೇಸ್ವಾಮಿ.ವಿ ವಿದ್ಯಾರ್ಥಿಗಳಿಗೆ ಪ್ರವೇಶಾನುಮೋದನೆ ನೀಡಿರುವ ಕುರಿತು | 1 |
| 2. | 2024-25.ಸಾ.ವಿ.ಪ-01 ಶೈ.ವಿ-02 | ಸ್ನಾತಕೋತ್ತರ ಗಣಿತಶಾಸ್ತ್ರ ವಿಷಯದ ಪಠ್ಯಕ್ರಮವನ್ನು ಸಲ್ಲಿಸಿರುವ ಕುರಿತು. | 2 |
| 3. | 2024-25.ಸಾ.ವಿ.ಪ-01 ಶೈ.ವಿ-03 | 'ಕಲಿಕೆ ಜೊತೆಗೆ ಕೌಶಲ್ಯ' ಎಂಬ SEC ಪತ್ರಿಕೆಗಳನ್ನು ಅಧಿಸೂಚಿಸಿರುವ ಕ್ರಮದ ಸ್ಥಿರೀಕರಣದ ಕುರಿತು. | 3 |
| 4. | 2024-25.ಸಾ.ವಿ.ಪ-01 ಶೈ.ವಿ-04 | Bachelor of Commerce (B.Com) in Banking, Financial Services & Insurance (BFSI-AEDP) ನ ಕೋರ್ಸಿನ ಪಠ್ಯಕ್ರಮವನ್ನು ಅನುಮೋದಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | 4 |
| 5. | 2024-25.ಸಾ.ವಿ.ಪ-01 ಶೈ.ವಿ-05 | 2024-25 ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳ ಸಮ:ಬೆಸ ಸೆಮಿಸ್ಟರ್‌ನ ಶೈಕ್ಷಣಿಕ ವೇಳಾಪಟ್ಟಿಯನ್ನು ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | 5 |
| 6. | 2024-25.ಸಾ.ವಿ.ಪ-01 ಶೈ.ವಿ-06 | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ 2024-25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಾಗಿ ಪ್ರವೇಶ ಮಿತಿಯನ್ನು ನಿಗದಿಪಡಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | 6 |
| 7. | 2024-25.ಸಾ.ವಿ.ಪ-01 ಶೈ.ವಿ-07 | 2024-25ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಅನುಮೋದನೆ ಕುರಿತು. | 7 |
| | | **ಪರೀಕ್ಷಾ ವಿಭಾಗ** | |
| 8. | 2024-25.ಸಾ.ವಿ.ಪ-01 ಪ.ವಿ-01 | 2023-24ನೇ ಶೈಕ್ಷಣಿಕ ಸಾಲಿನ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆಗೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡಾವಳಿಯ ಕುರಿತು. | 8 |
| | | **ಸಂಶೋಧನಾ ವಿಭಾಗ** | |
| 9 | 2024-25.ಸಾ.ವಿ.ಪ-01 ಸಂ.ವಿ-01 | ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ವಿನಿಯಮ 2023 ನ್ನು ಪರಿಷ್ಕರಿಸಿ ಸಿದ್ಧಪಡಿಸಿರುವ ವಿನಿಯಮವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ವಿನಿಯಮವನ್ನು ಅನುಮೋದಿಸುವ ವಿಷಯದ ಕುರಿತು. | 9 |
| | | **ಅಭಿವೃದ್ಧಿ ವಿಭಾಗ** | |
| 10 | 2024-25.ಸಾ.ವಿ.ಪ-01 ಅ.ವಿ-01 | 2023-24ನೇ ಸಾಲಿನ ವಾರ್ಷಿಕ ವರದಿ ಕುರಿತು. | 10 |
| | | **ಕಾಲೇಜು ಅಭಿವೃದ್ಧಿ ಪರಿಷತ್ತು** | |
| 11 | 2024-25.ಸಾ.ವಿ.ಪ-01 ಕಾ.ಅ.ಪ-01 | ತುಮಕೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳನ್ನು ಪರಿಶೀಲನೆ ನಡೆಸಿ ಸಮಿತಿಗಳು ಸಲ್ಲಿಸಿರುವ ವರದಿಗಳ ಕುರಿತು. | 11 |

| ವಿಷಯ ಸಂಖ್ಯೆ | 2024-25:ಸಾ.ವಿ.ವಿ.ಪ:01:ಶೈ.ವಿ.:01: ದಿನಾಂಕ:04.09.2024 |
|---|---|

**ವಿಷಯ:** ಸ್ನಾತಕೋತ್ತರ ಎಲ್ ಎಲ್ ಎಂ ಕೋರ್ಸ್‌ನ ಚೇತನ್ ಕುಮಾರ್ ಎಲ್ ಮತ್ತು ತಿಪ್ಪೇಸ್ವಾಮಿ ವಿ ವಿದ್ಯಾರ್ಥಿಗಳಿಗೆ ಪ್ರವೇಶಾನುಮೋದನೆ ನೀಡಿರುವ ಕುರಿತು

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023-24 ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಎಲ್. ಎಲ್. ಎಂ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಪ್ರವೇಶ ಪಡೆದಿರುವ ಚೇತನ್ ಕುಮಾರ್ ಎಲ್, ಇವರು ಎಲ್. ಎಲ್, ಬಿ ಪದವಿಯಲ್ಲಿ ಪಡೆದಿರುವ ಶೇ. ಪ್ರಮಾಣ 44.68 ಮತ್ತು ತಿಪ್ಪೇಸ್ವಾಮಿ ವಿ ಇವರು ಎಲ್. ಎಲ್, ಬಿ ಪದವಿಯಲ್ಲಿ ಶೇ. ಪ್ರಮಾಣ 44.53 ಅಂಕ ಪಡೆದಿರುತ್ತಾರೆ.

ಸ್ನಾತಕೋತ್ತರ ಪದವಿಗಳ ಪ್ರವೇಶಾನುಮೋದನೆಗೆ ಸಾಮಾನ್ಯ ವರ್ಗಕ್ಕೆ ಶೇ.45% ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ ಪ್ರವರ್ಗ-1 ವಿದ್ಯಾರ್ಥಿಗಳಿಗೆ ಶೇ.40% ಅಂಕಗಳನ್ನು ಪಡೆದಿರಬೇಕು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿ ಪ್ರವೇಶಾತಿ ಅಧಿಸೂಚನೆಯಲ್ಲಿ Minimum percentage of marks in qualifying examination shall not be below 45%(44.5% and above shall be treated as 45%) of total marks in case of general category applicants.

**IN THE COURT OF JUDICATURE AT MADRAS JUDGEMENT DATE:21.04.2021**

Havinf regard to the above since the appellant has secured 44.5% and there is a fraction of 0.5% is less to get herself qualified for admission into D.T.Ed Course and that the decimal digit is 0.5 which is not below to 0.5, we make it rounded off to 1 and thereby, the appellant virtually secured 45% of the marks.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಪ್ರವೇಶಾತಿ ಅಧಿಸೂಚನೆಯ ನಿಬಂಧನೆ ಹಾಗೂ ನ್ಯಾಯಾಲಯದ ಆದೇಶದಂತೆ ಚೇತನ್ ಕುಮಾರ್ ಎಲ್ ಮತ್ತು ತಿಪ್ಪೇಸ್ವಾಮಿ ವಿ ಇವರಿಗೆ ಪ್ರವೇಶಾನುಮೋದನೆ ನೀಡಿರುವ ಕ್ರಮವನ್ನು ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2024–25:ಸಾ.ವಿ.ವಿ.ಪ:01:ಶೈ.ವಿ.:02:ದಿನಾಂಕ:04.09.2024 |
|---|---|

**ವಿಷಯ:** ಸ್ನಾತಕೋತ್ತರ ಗಣಿತಶಾಸ್ತ್ರ ವಿಷಯದ ಪಠ್ಯಕ್ರಮವನ್ನು ಸಲ್ಲಿಸಿರುವ ಕುರಿತು.

*****

ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮಂಡಳಿ ಮುಖ್ಯಸ್ಥರು, ಸದಸ್ಯರೊಂದಿಗೆ ಸಭೆ ನಡೆಸಿ ಸಭಾ ನಡಾವಳಿಯೊಂದಿಗೆ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪಠ್ಯಕ್ರಮ ಹಾಗೂ 70:30 (SEE:IA) ಮಾದರಿಯಲ್ಲಿ ಪ್ರಶ್ನೆ ಪತ್ರಿಕೆ ಮಾದರಿಯನ್ನು ಸಿದ್ದಪಡಿಸಿ ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಿಯಾಗಿರುವ ಸ್ನಾತಕೋತ್ತರ ಗಣಿತಸಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪಠ್ಯಕ್ರಮ ಹಾಗೂ 70:30 (SEE:IA) ಮಾದರಿಯ ಪ್ರಶ್ನೆ ಪತ್ರಿಕೆ ಮಾದರಿಯನ್ನು 2024–25 ನೇ ಸಾಲಿನಿಂದ ಅಳವಡಿಸಿಕೊಳ್ಳುವ ಸಂಬಂಧ ಅಧಿಸೂಚನೆ ಹೊರಡಿಸುವ ಕುರಿತು ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2024-25: ಪ್ರ.ಸಾ.ವಿ.ವಿ.ಪ:01 ಶೈವಿ:03 ದಿನಾಂಕ:04.09.2024 |
|---|---|

ವಿಷಯ :"ಕಲಿಕೆ ಜೊತೆಗೆ ಕೌಶಲ್ಯ" ಎಂಬ SEC ಪತ್ರಿಕೆಗಳನ್ನು ಅಧಿಸೂಚಿಸಿರುವ ಕ್ರಮದ ಸ್ಥಿರೀಕರಣದ ಕುರಿತು.

ಉಲ್ಲೇಖ: 1) ಕರ್ನಾಟಕ ಸರ್ಕಾರ ಕೌಶಲ್ಯಾಭಿವೃದ್ಧಿನಿಗಮ ಇವರ ಇ-ಮೇಲ್ ಪತ್ರ ದಿ:01.03.2024.

2) ವಿವಿ ಪತ್ರ ಸಂಖ್ಯೆ:ತುವಿ:ಶೈವಿ:ಸಾ.ಪ:2023-24/4749-51 ದಿ:14.03.2024.

3) ವಿವಿ ಅಧಿಸೂಚನೆ ಪತ್ರದ ಸಂಖ್ಯೆ:ತುವಿ:ಶೈವಿ:2023-24/247 ದಿ:06.05.2024.

4) ಸ್ನಾತಕ ವಾಣಿಜ್ಯಶಾಸ್ತ್ರ ಮತ್ತು ಗಣಕ ವಿಜ್ಞಾನ ಅಧ್ಯಯನ ಮಂಡಳಿಗಳ ಪತ್ರಗಳ ದಿ:14.06.2024 & 19.06.2024.

5) ವಿವಿ ಪರಿಷ್ಕೃತ ಅಧಿಸೂಚನೆ ಸಂಖ್ಯೆ:ತುವಿ:ಶೈವಿ:SEC:2023-24/311 ದಿ:25.06.2024.

*****

ಮೇಲ್ಕಂಡ ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ, **"ಕಲಿಕೆಯ ಜೊತೆಗೆ ಕೌಶಲ್ಯ"** ಎಂಬ ವಿನೂತನ ಕಾರ್ಯಕ್ರಮದಡಿ ಕೈಗಾರಿಕಾ ಆದ್ಯತಾ ಮತ್ತು ಉದ್ಯಮಶೀಲತಾ ತರಬೇತಿಯನ್ನು ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ನಿಗಮ ಇವರು ವಿನೂತನ ಕಾರ್ಯಕ್ರಮವನ್ನು ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರತಿ ಕಾಲೇಜಿನಲ್ಲಿ ಸ್ನಾತಕ ಪದವಿಯ ಅಂತಿಮ ವರ್ಷದಲ್ಲಿರುವ ಆರನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ SEC ಪತ್ರಿಕೆ ಆಗಿ ಆಯ್ಕೆ ಮಾಡಿಕೊಂಡು ಆಫ್ ಲೈನ್ ಮೂಲಕ ತರಬೇತಿ ನೀಡಿ ಮೌಲ್ಯಮಾಪನ ಕಾರ್ಯವನ್ನು KSDC ವತಿಯಿಂದ ಪೂರ್ಣಗೊಳಿಸಿ ಅಂಕ ಮತ್ತು ಗ್ರೇಡ್‌ಅನ್ನು ನೀಡಲು ನಿರ್ಣಯಿಸಿರುತ್ತಾರೆ. ಈ ಸಂಬಂಧದಲ್ಲಿ ಉಲ್ಲೇಖ (01)ರ ಪತ್ರದಲ್ಲಿ ತಿಳಿಸಿರುವಂತೆ ವಿವಿಧ ಅಧ್ಯಯನ ಮಂಡಳಿಗಳ ಪಠ್ಯಕ್ರಮವನ್ನು ಶಿಫಾರಸ್ಸಿಗಾಗಿ ಉಲ್ಲೇಖ (02)ರಲ್ಲಿ ವಿಶ್ವವಿದ್ಯಾನಿಲಯದ ಪತ್ರದಲ್ಲಿ ಕೋರಲಾಗಿತ್ತು. ವಿಶ್ವವಿದ್ಯಾನಿಲಯವು ರಚಿಸಿರುವ ಅಧ್ಯಯನ ಮಂಡಳಿಗಳು ಸಭೆಯನ್ನು ನಡೆಸಿ, ಉಲ್ಲೇಖ (03)ರಲ್ಲಿ ಅಧಿಸೂಚಿಸಲಾಗಿತ್ತು. ಉಲ್ಲೇಖ (04)ರ ಸಭಾ ನಡಾವಳಿಗಳಂತೆ ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆಪಠ್ಯಕ್ರಮವನ್ನು ಅನುಮೋದಿಸಿರುವ ಕುರಿತು ಸಭಾ ನಡಾವಳಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗಿರುತ್ತದೆ.

| ಕ್ರ.ಸಂ | ಅಧ್ಯಯನ ಮಂಡಳಿ | ವಿಷಯ | ಪಠ್ಯಕ್ರಮದ ವಿವರ |
|---|---|---|---|
| 1 | ಸ್ನಾತಕ ವಾಣಿಜ್ಯ ಶಾಸ್ತ್ರ ಅಧ್ಯಯನ ಮಂಡಳಿ | B.Com & BBA ವಿದ್ಯಾರ್ಥಿಗಳಿಗೆ | * GST Accounting<br>* Digital Marketing |
| 2 | ಸ್ನಾತಕ ಗಣಕ ವಿಜ್ಞಾನ ಅಧ್ಯಯನ ಮಂಡಳಿ | B.Sc & BCA ವಿದ್ಯಾರ್ಥಿಗಳಿಗೆ | * Graphics Design<br>* Data Analysis and Visualization |
| 3 | ಸ್ನಾತಕ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮಂಡಳಿ | BA,BSW & BVA ವಿದ್ಯಾರ್ಥಿಗಳಿಗೆ | * Media & Film Making<br>*Content & communication |

ಸದರಿ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಸಭಾ ನಡಾವಳಿಗಳನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದ ಸಭೆ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಉಲ್ಲೇಖ (05)ರಲ್ಲಿ ಪರಿಷ್ಕೃತ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ, ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕೆ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2024–25: ಪ್ರಸಾ.ವಿ.ವಿ.ಪ:01 ಶೈವಿ:04 ನಾಂಕ:04.09.2024 |
|---|---|

**ವಿಷಯ :Bachelor of Commerce (B.Com) in Banking, Financial Services & Insurance (BFSI-AEDP) ನ ಕೋರ್ಸಿನ ಪಠ್ಯಕ್ರಮದ ಅನುಮೋದಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು.**

**ಉಲ್ಲೇಖ:** 1) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಬೆಂಗಳೂರು ಇವರ ಇ–ಮೇಲ್ ಪತ್ರ ದಿನಾಂಕ:24.05.2024

2) ವಿವಿ ಪತ್ರದ ಸಂಖ್ಯೆ:ತುವಿ:ಶೈವಿ:ಸಾ.ಪ:2024–25/913 ದಿ:24.05.2024.

3) ಅಧ್ಯಕ್ಷರು ಸ್ನಾತಕ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿ ಇವರ ಪತ್ರ ದಿನಾಂಕ:27.05.2024.

4) ವಿವಿ ಅಧಿಸೂಚನೆ ಪತ್ರದ ಸಂಖ್ಯೆ:ತುವಿ:ಶೈವಿ: BFSI:2023–24/1354 ದಿ:28.06.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ Apprenticeship Embedded Degree Course (AEDPs) ಕೋರ್ಸಿನ ಸ್ನಾತಕ ವಾಣಿಜ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಸಂಬಂಧದಲ್ಲಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ Bachelor of Commerce (B.Com) In Banking Financial Services & Insurance (BFSI-AEDP) ನ ಕೋರ್ಸ್‌ಅನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು ಇಲ್ಲಿಗೆ ಮಂಜೂರು ಮಾಡಿ ಸಂಬಂಧಪಟ್ಟ ಪಠ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿಯ ಅನುಮೋದನೆಗಾಗಿ ಉಲ್ಲೇಖ (01)ರ ಪತ್ರದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದು, ಉಲ್ಲೇಖ (02)ರಲ್ಲಿ ಪಠ್ಯಕ್ರಮವನ್ನು ಅನುಮೋದನೆಗಾಗಿ ಸ್ನಾತಕ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿಗೆ ಸಲ್ಲಿಸಲಾಗಿತ್ತು. ಸದರಿ ಅಧ್ಯಯನ ಮಂಡಳಿಯವರು ಪಠ್ಯಕ್ರಮವನ್ನು ಪರಿಶೀಲಿಸಿ, ಅನುಮೋದಿಸಿ ಉಲ್ಲೇಖ (03)ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಭಾ ನಡಾವಳಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಸಭಾ ನಡಾವಳಿಗಳನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದ ಸಭೆ ಅನುಮೋದನೆಯ ಸ್ಥಿರೀಕರಣಕ್ಕೊಳಪಟ್ಟು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆಉಲ್ಲೇಖ (04)ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ, ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕೆ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ | **2024–25: ಪ್ರಸಾ.ವಿ.ವಿ.ಪ:01 ಶೈವಿ:05 ದಿನಾಂಕ:04.09.2024** |
|---|---|

**ವಿಷಯ :2024–25 ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳ ಸಮ:ಬೆಸ ಸೆಮಿಸ್ಟರ್‌ನ ಶೈಕ್ಷಣಿಕ ವೇಳಾಪಟ್ಟಿಯನ್ನು ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು.**

**ಉಲ್ಲೇಖ: 1) ಶೈಕ್ಷಣಿಕ ವೇಳಾಪಟ್ಟಿ ಸಮಿತಿಯ ಸಭಾ ನಡಾವಳಿಗಳ ದಿನಾಂಕ:31.05.2024**

**2) ವಿವಿ ಅಧಿಸೂಚನೆ ಸಂಖ್ಯೆ: ತುವಿ:.ಶೈ.ವಿ:ವೇ.ಪ:2024–25:/1687 ದಿ:29.07.2024**

**3) ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು–1) ಸರ್ಕಾರಿ ಆದೇಶ ಸಂ: ಇಡಿ 201 ಯುಎನ್‌ಇ:2023: ಬೆಂಗಳೂರು, ದಿ:30.07.2024**

**4) ವಿವಿ ಪರಿಷ್ಕೃತ ಅಧಿಸೂಚನೆ ಸಂಖ್ಯೆ: ತುವಿ:.ಶೈ.ವಿ:ವೇ.ಪ:2024–25:/1708 :31.07.2024**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2024–25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಶೈಕ್ಷಣಿಕ ವೇಳಾಪಟ್ಟಿಯನ್ನು ಉಲ್ಲೇಖ (01)ರ ಸಭಾ ನಡಾವಳಿಗಳಂತೆ, ಶೈಕ್ಷಣಿಕ ವೇಳಾ ಪಟ್ಟಿಯನ್ನು ಸಿದ್ದಪಡಿಸಿ ಸಲ್ಲಿಸಿದ್ದು ಸದರಿ ಸಮಿತಿಯ ಸಭಾ ನಡಾವಳಿಗಳನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರವಾದ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಒಳಪಟ್ಟು, ಉಲ್ಲೇಖ (02)ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಉಲ್ಲೇಖ (03) ಸರ್ಕಾರಿ ಆದೇಶದನ್ವಯ ಉಲ್ಲೇಖ (02)ರಲ್ಲಿ ವಿಶ್ವವಿದ್ಯಾನಿಲಯವು ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆದು, ವಿವಿಧ ಸ್ನಾತಕ ಪದವಿ ಕೋರ್ಸ್‌ಗಳ ಸಮ:ಬೆಸ ಸೆಮಿಸ್ಟರ್ ವೇಳಾಪಟ್ಟಿಯನ್ನು (Calendar of Events) ಪರಿಷ್ಕರಿಸಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಉಲ್ಲೇಖ (04)ರಲ್ಲಿ ಅಧಿಸೂಚಿಸಲಾಗಿದೆ. ಸದರಿ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ, ಅಧಿಸೂಚಿಸಿರುವ ಕ್ರಮವನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2024-25: ಪ್ರಸಾ.ವಿ.ವಿ.ಪ:01 ಶೈವಿ:06 ದಿನಾಂಕ:04.09.2024 |
|---|---|

ವಿಷಯ :ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ 2024-25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಾಗಿ ಪ್ರವೇಶ ಮಿತಿಯನ್ನು ನಿಗದಿಪಡಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು.

ಉಲ್ಲೇಖ: 1) ವಿವಿ ಅಧಿಸೂಚನೆ ಸಂಖ್ಯೆ: ತುವಿ:.ಶೈ.ವಿ:2024-25/988 ದಿ:01.06.2024.

2) ವಿವಿ ಅಧಿಸೂಚನೆ ಸಂಖ್ಯೆ: ತುವಿ:.ಶೈ.ವಿ:2024-25/989 ದಿ:01.06.2024.

3) ವಿವಿ ಅಧಿಸೂಚನೆ ಸಂಖ್ಯೆ:ತುವಿ:ಶೈವಿ:2024-25/1256 ದಿ:14.06.2024.

4) ವಿವಿ ಅಧಿಸೂಚನೆ ಸಂಖ್ಯೆ: ತುವಿ:.ಶೈ.ವಿ:2024-25/1237 ದಿ:20.06.2024.

5) ವಿವಿ ಅಧಿಸೂಚನೆ ಸಂಖ್ಯೆ: ತುವಿ:.ಶೈ.ವಿ:2024-25/1961 ದಿ:27.08.2024.

6) ವಿವಿ ಅಧಿಸೂಚನೆ ಸಂಖ್ಯೆ: ತುವಿ:ಶೈ.ವಿ:UG-BCA:2024-25/1962 ದಿ:27.08.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಸರ್ಕಾರದ ಆದೇಶದನ್ವಯ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ಮೂರು ಮೇಜರ್ ವಿಷಯಗಳ ಸಮೂಹ ಕಾಂಬಿನೇಷನ್‌ಗಳನ್ನು ಮತ್ತು ಪ್ರವೇಶ ಮಿತಿಯನ್ನು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜು ಹಾಗೂ ಕಲಾ ಕಾಲೇಜುಗಳಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಉಲ್ಲೇಖ (01) ರಿಂದ (06)ರ ವರೆಗೆ ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವುದನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದ ಷರತ್ತಿಗೊಳಪಟ್ಟು ಅಧಿಸೂಚಿಸಲಾಗಿತ್ತು. ಸದರಿ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ, ಅಧಿಸೂಚಿಸಿರುವ ಕ್ರಮವನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

**ವಿಶ್ವವಿದ್ಯಾನಿಲಯ ಕಲಾ ಕಾಲೇಜು**

| Course | Combination | Subjects | ನಿಗದಿಪಡಿಸಿರುವ ಪ್ರವೇಶ ಮಿತಿ (Intake) |
|---|---|---|---|
| BA | HEP | History, Economics, Political Science | 144 |
| | HEK | History, Economics, Optional Kannada. | 144 |
| | JKP | Journalism, Optional Kannada, Political Science | 72 |
| | HES | History, Economics, Sociology | 144 |
| | Eng S P | Optional English, Sociology, Political Science | 144 |
| | HJEng | History, Journalism, Optional English | 72 |
| | LJ Psy | Library Science, Journalism, Psychology | 72 |
| | Psy CJ | Psychology-Criminology – Journalism | 30 |
| | Psy J Opt.Eng | Psychology-Journalism – Optional English | 30 |
| | Psy C Opt.Eng | Psychology-Criminology – Optional English | 30 |
| | Psy C Opt.Kan | Psychology-Criminology – Optional Kannada | 30 |
| | Psy J Opt Kan | Psychology-Journalism – Optional Kannada | 30 |

ಪು.ತಿ.ನೋ...

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು

| SL.NO | Course | Combination | ನಿಗದಿಪಡಿಸಿರುವ ಪ್ರವೇಶ ಮಿತಿ (Intake) |
|---|---|---|---|
| 1 | B.Sc | PCM | 180 |
| 2 | | PMCs | 120 |
| 3 | | PME | 60 |
| 4 | | CBZ | 120 |
| 5 | | CZMb | 60 |
| 6 | | E&C | 60 |
| 7 | | EMCs | 60 |
| 8 | | CBBt | 30 |
| 9 | | CZBt | 30 |
| 10 | | ZBcMb | 30 |
| 11 | | CZBc | 30 |
| 12 | | CBBc | 30 |
| 13 | | BBcMb | 30 |
| 14 | BCA | | 180 |
| 15 | BCA (Data Science) | | 120 |
| 16 | B.VOC | | 60 |
| 17 | B.Sc | Z.Bc.Bt (New Combination) | 30 |
| 18 | BCA | Artificial Intelligence and Machine Learning | 15 |

ಸದರಿ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ, ಅಧಿಸೂಚಿಸಿರುವ ಕ್ರಮವನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2024-25: ಪ್ರಸಾ.ವಿ.ವಿ.ಪ:01 ಶೈವಿ: 07 ದಿನಾಂಕ:04.09.2024 |
|---|---|

**ವಿಷಯ :2024-25ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಅನುಮೋದನೆ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಅಡಿಯಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿ ವಿಶ್ವವಿದ್ಯಾನಿಲಯದಿಂದ ಅಧಿಸೂಚಿಸಲಾಗಿತ್ತು. ಸದರಿ ಸಮಿತಿಗಳ ಅಧ್ಯಯನ ಮಂಡಳಿಯವರು ಸಭೆಯನ್ನು ನಡೆಸಿ, ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವ ಅಧ್ಯಯನ ಮಂಡಳಿಗಳು ವಿವಿಧ ಸ್ನಾತಕ ಪದವಿ ಕೋರ್ಸುಗಳ ವಿಷಯಗಳ ಪಠ್ಯಕ್ರಮಗಳನ್ನು ರಾಜ್ಯ ಶಿಕ್ಷಣ ನೀತಿ ಹಾಗೂ ತುಮಕೂರು ವಿಶ್ವವಿದ್ಯಾನಿಲಯದ Programme Structure ಅನ್ವಯದಂತೆ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ರಚಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದು, ಸದರಿ ಪಠ್ಯಕ್ರಮಗಳನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಗೆ ಅನುಮೋದನೆಗಾಗಿ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ಕ್ರಸಂ | ಪಠ್ಯಕ್ರಮಗಳನ್ನು ಸಲ್ಲಿಸಿರುವ ಅಧ್ಯಯನ ಮಂಡಳಿಗಳು |
|---|---|
| 1 | ಸ್ನಾತಕ ಕನ್ನಡ ಅಧ್ಯಯನ ಮಂಡಳಿ |
| 2 | ಸ್ನಾತಕ ಮನಃಶಾಸ್ತ್ರ ಅಧ್ಯಯನ ಮಂಡಳಿ |
| 3 | ಸ್ನಾತಕ ಗಣಕವಿಜ್ಞಾನ ಅಧ್ಯಯನ ಮಂಡಳಿ |
| 4 | ಸ್ನಾತಕ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿ |
| 5 | ಸ್ನಾತಕ ಅರ್ಥಶಾಸ್ತ್ರ ಅಧ್ಯಯನ ಮಂಡಳಿ |
| 6 | ಸ್ನಾತಕ ವ್ಯವಹಾರ ಆಡಳಿತ ಅಧ್ಯಯನ ಮಂಡಳಿ |
| 7 | ಸ್ನಾತಕ ಪತ್ರಿಕೋದ್ಯಮ ಅಧ್ಯಯನ ಮಂಡಳಿ |
| 8 | ಸ್ನಾತಕ ಜೈವಿಕ ತಂತ್ರಜ್ಞಾನ ಅಧ್ಯಯನ ಮಂಡಳಿ |
| 9 | ಸ್ನಾತಕ ರಸಾಯಶಾಸ್ತ್ರ ಅಧ್ಯಯನ ಮಂಡಳಿ |
| 10 | ಸ್ನಾತಕ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿ |
| 11 | ಸ್ನಾತಕ ಪ್ರಾಣಿಶಾಸ್ತ್ರ ಅಧ್ಯಯನ ಮಂಡಳಿ |
| 12 | ಸ್ನಾತಕ ಭೌತಶಾಸ್ತ್ರ ಅಧ್ಯಯನ ಮಂಡಳಿ |
| 13 | ಸ್ನಾತಕ ಸಮಾಜಕಾರ್ಯ ಅಧ್ಯಯನ ಮಂಡಳಿ |
| 14 | ಸ್ನಾತಕ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿ |
| 15 | ಸ್ನಾತಕ ಇಂಗ್ಲೀಷ್ ಅಧ್ಯಯನ ಮಂಡಳಿ |
| 16 | ಸ್ನಾತಕ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿ |
| 17 | ಸ್ನಾತಕ ಸಮಾಜಶಾಸ್ತ್ರ ಅಧ್ಯಯನ ಮಂಡಳಿ |
| 18 | ಸ್ನಾತಕ ಗಣಿತಶಾಸ್ತ್ರ ಅಧ್ಯಯನ ಮಂಡಳಿ |
| 19 | ಸ್ನಾತಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿ |
| 20 | ಸ್ನಾತಕ BSc Fire & Industrial Safety ಅಧ್ಯಯನ ಮಂಡಳಿ |

| | |
|---|---|
| 21 | ಸ್ನಾತಕ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮಂಡಳಿ |
| 22 | ಸ್ನಾತಕ ಸಂಸ್ಕೃತ ಅಧ್ಯಯನ ಮಂಡಳಿ |
| 23 | ಸ್ನಾತಕ ವಿದ್ಯನ್ಮಾನ ಅಧ್ಯಯನ ಮಂಡಳಿ |
| 24 | ಸ್ನಾತಕ ಹಿಂದಿ ಅಧ್ಯಯನ ಮಂಡಳಿ |
| 25 | ಸ್ನಾತಕ ಭೂಗೋಳಶಾಸ್ತ್ರ ಅಧ್ಯಯನ ಮಂಡಳಿ |
| 26 | ಸ್ನಾತಕ ಬಿಎಸ್ಸಿ-ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ಅಧ್ಯಯನ ಮಂಡಳಿ |
| 27 | ಸ್ನಾತಕ ಉರ್ದು ಅಧ್ಯಯನ ಮಂಡಳಿ |
| 28 | ಸ್ನಾತಕ ಇತಿಹಾಸ ಅಧ್ಯಯನ ಮಂಡಳಿ |
| 29 | ಸ್ನಾತಕ ಬಿವೋಕ್ ಅಧ್ಯಯನ ಮಂಡಳಿ |
| 30 | ಸ್ನಾತಕ ಬಿಎಫ್ಎ/ಬಿವಿಎ ಅಧ್ಯಯನ ಮಂಡಳಿ |
| 31 | ಸ್ನಾತಕ B.Sc Fashion and Apparel Design ಅಧ್ಯಯನ ಮಂಡಳಿ |
| 32 | ಸ್ನಾತಕ ಬಿಎ ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಅಧ್ಯಯನ ಮಂಡಳಿ |

| ವಿಷಯ ಸಂಖ್ಯೆ: | **2024–25 ವಿವಿಪ.: 01:ಪ.ವಿ.: 01 :ದಿ.:04.09.2024** |
|---|---|

**ವಿಷಯ:** 2023–24ನೇ ಶೈಕ್ಷಣಿಕ ಸಾಲಿನ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆಗೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡಾವಳಿಯ ಕುರಿತು.

* * * * * * *

ಪರೀಕ್ಷಾ ಅಕ್ರಮ ಚಟುವಟಿಕೆಗಳ ವಿಚಾರಣಾ ಸಮಿತಿಯ ಅಧ್ಯಕ್ಷರಾದ **ಪ್ರೊ.ಎಂ.ಕೊಟ್ರೇಶ್, ಪ್ರಾಧ್ಯಾಪಕರು ಹಾಗೂ ಡೀನರು, ಕಲಾ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**. ಇವರ ಅಧ್ಯಕ್ಷತೆಯಲ್ಲಿ **ದಿನಾಂಕ:12.07.2024** ರಂದು ಮಾನ್ಯ ಕುಲಸಚಿವರು(ಪರೀಕ್ಷಾಂಗ) ರವರ ಕೊಠಡಿಯಲ್ಲಿ 2024 ರ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳ I, III & V ನೇ ಸೆಮಿಸ್ಟರ್‌ಗಳ (NEP, CBCS, & DOUBLE DURATION) ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಒಟ್ಟು 74 ವಿದ್ಯಾರ್ಥಿಗಳಲ್ಲಿ ಹಾಜರಾದ ಒಟ್ಟು **53** ವಿದ್ಯಾರ್ಥಿಗಳನ್ನು ವೈಯಕ್ತಿಕ ವಿಚಾರಣೆಗೆ ಒಳಪಡಿಸಿದ್ದು. ಮತ್ತು ಸಭೆಗೆ ಗೈರುಹಾಜರಾದ **21** ವಿದ್ಯಾರ್ಥಿಗಳಿಗೆ ಅವರ ಅನುಪಸ್ಥಿತಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ. ಸದರಿ ಸಮಿತಿ ಸಭೆಯ ನಡಾವಳಿಗಳನ್ನು **ಅನುಬಂಧ–1** ರಲ್ಲಿ ಲಗತ್ತಿಸಿದೆ, **ಈ ವಿಷಯವನ್ನು ಪ್ರಥಮ ಸಾಮಾನ್ಯ ವಿದ್ಯಾ ವಿಷಯಕ ಪರಿಷತ್ತಿನ ಸಭೆಯ ಮುಂದೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.**

| ವಿಷಯ ಸಂಖ್ಯೆ: | **2024-25: ವಿ.ವಿ.ಪ : 01 ಪಿಹೆಚ್.ಡಿ–01 ದಿನಾಂಕ: 04.09.2024** |
|---|---|

**ವಿಷಯ:** **ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ವಿನಿಯಮ 2023 ನ್ನು ಪರಿಷ್ಕರಿಸಿ ಸಿದ್ಧಪಡಿಸಿರುವ ವಿನಿಯಮವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಅನುಮೋದಿಸುವ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸುವ ಕುರಿತು.**

**ಉಲ್ಲೇಖ:**
1. University Grants Commission (Minimum Standards and Procedures for Award of Ph.D Degree) Regulations 2022, Notified on 7th November 2022.
2. ವಿದ್ಯಾವಿಷಯಕ್ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳ ನಿರ್ಣಯದ ದಿನಾಂಕ: 13.09.2023.
3. ಸಂಖ್ಯೆ: ತುವಿ/ಸಂ.ವಿ:/2023–24/ 660 ದಿನಾಂಕ: 29.09.2023
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ದಿನಾಂಕ: 02.03.2024.
5. ಪಿಹೆಚ್.ಡಿ ವಿನಿಯಮ ಪರಿಷ್ಕರಿಸುವ ಸಭಾ ನಡಾವಳಿ ದಿನಾಂಕ: 15.03.2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ವಿನಿಯಮ 2023 ಹೊಸ ನಿಯಮಾವಳಿಯನ್ನು ಉಲ್ಲೇಖ (01) ರ ಯುಜಿಸಿ 2022 ರ ಮಾರ್ಗಸೂಚಿಯಂತೆ ಸಿದ್ಧಪಡಿಸಲಾಗಿದ್ದು, ಉಲ್ಲೇಖ (02) ರ ವಿದ್ಯಾವಿಷಯಕ ಪರಿಷತ್ & ಸಿಂಡಿಕೇಟ್ ಸಭೆಗಳ ನಿರ್ಣಯದನ್ವಯ ಉಲ್ಲೇಖ (03) ರಲ್ಲಿ **ದಿನಾಂಕ: 29.09.2023 ರ ಪತ್ರದಲ್ಲಿ Regulations of Tumkur University governing the standards and procedures for the Award of the degree of Doctor of Philosophy- 2023** ನ್ನು ಸರ್ಕಾರದ ಅನುಮೋದನೆ ಮತ್ತು ಅಂಕಿತಕ್ಕಾಗಿ ಸಲ್ಲಿಸಲಾಗಿತ್ತು.

ಈ ಸಂಬಂಧ ಉಲ್ಲೇಖ (04) ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ರವರು **ದಿನಾಂಕ: 02.03.2024** ರ ಪತ್ರದಲ್ಲಿ ತಿಳಿಸಿರುವಂತೆ, ತುಮಕೂರು ವಿಶ್ವವಿದ್ಯಾನಿಲಯದ **Regulations governing Award of Ph.D. Degree-2023** ಪಿಹೆಚ್.ಡಿ. ವಿನಿಯಮವನ್ನು ಉನ್ನತ ಶಿಕ್ಷಣ ಪರಿಷತ್ತು ಪರಿಶೀಲಿಸಿ ಸದರಿ ವಿನಿಯಮದಲ್ಲಿನ ಮುದ್ರಣ ದೋಷಗಳು/ಅಸಂಗತಗಳನ್ನು ಗಮನಿಸಿ ತಿದ್ದುಪಡಿಗಳನ್ನು ಸೂಚಿಸಿರುತ್ತಾರೆ. ಪ್ರಸ್ತಾಪಿತ ಕರಡು ವಿನಿಯಮಕ್ಕೆ ಸಂಬಂಧಿಸಿದಂತೆ ಮುದ್ರಣ ದೋಷಗಳು/ಅಸಂಗತಗಳನ್ನು ಕೈಬಿಡುವ ಮತ್ತು ಸೇರ್ಪಡೆ ಮಾಡುವ ಮೂಲಕ ವಿಶ್ವವಿದ್ಯಾನಿಲಯದ ಅಗತ್ಯ ಪ್ರಾಧಿಪಾರಗಳ ಅನುಮೋದನೆ ಪಡೆದು ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ (05) ರಲ್ಲಿ **ದಿನಾಂಕ: 15.03.2024 ರ ಮಧ್ಯಾಹ್ನ 2.30 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ಕೊಠಡಿಯಲ್ಲಿ ಸಭೆಯನ್ನು ನಡೆಸಲಾಯಿತು. ಸಮಿತಿಯ ಅಧ್ಯಕ್ಷರಾದ ಕುಲಸಚಿವರು (ಮೌಲ್ಯಮಾಪನ) ಹಾಗೂ ಎಲ್ಲಾ ಸದಸ್ಯರು ವಿಸ್ತೃತವಾಗಿ ಚರ್ಚಿಸಿ ಸರ್ವಾನುಮತದಿಂದ ವಿನಿಯಮವನ್ನು ಪರಿಷ್ಕರಿಸಿ ಸಿದ್ಧಪಡಿಸಿ ಪಿಹೆಚ್.ಡಿ ವಿನಿಯಮದ ಕರಡು ಪ್ರತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.**

ಈ ಸಂಬಂಧ, ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ವಿನಿಯಮ 2023 ನ್ನು ಪರಿಷ್ಕರಿಸಿರುವ ಸಂಬಂಧ ಸರ್ಕಾರಕ್ಕೆ ಸಲ್ಲಿಸಲು ಅನುಮೋದಿಸುವ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ವಿಷಯ ಸಂಖ್ಯೆ: 2024–25/ಸಾ.ವಿ.ಪ–01/ಅ.ವಿ–06/ದಿನಾಂಕ:04.09.2024

**ವಿಷಯ: 2023–24 ನೇ ಸಾಲಿನ ವಾರ್ಷಿಕ ವರದಿ ಕುರಿತು.**

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 50(1) ರನ್ವಯ ವಾರ್ಷಿಕ ವರದಿಯನ್ನು ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳಿಗೆ ಮಂಡಿಸಿ, ಪ್ರಕರಣ 50(2) ರನ್ವಯ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧ 2023–24 ನೇ ಸಾಲಿನ ವಾರ್ಷಿಕ ವರದಿಯನ್ನು ಸಿದ್ಧಪಡಿಸಲು ರಚಿಸಲಾದ ಸಮಿತಿಯು ಕರಡು ವಾರ್ಷಿಕ ವರದಿ ಪ್ರತಿಯನ್ನು ಸಲ್ಲಿಸಿದ್ದು, ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ : | **2024-25 ಪ್ರ.ವಿ.ವಿ.ಪ-01: ಕಾ.ಅ.ಪ.-01, ದಿನಾಂಕ 04.09.2024** |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಬಿ.ಇಡಿ. ಶಿಕ್ಷಣ ಮಹಾವಿದ್ಯಾಲಯಗಳನ್ನು ಪರಿಶೀಲನೆ ನಡೆಸಿ ಸಮಿತಿಗಳು ಸಲ್ಲಿಸಿರುವ ವರದಿಗಳ ಕುರಿತು.**

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ 16 ಬಿ.ಇಡಿ. ಶಿಕ್ಷಣ ಮಹಾವಿದ್ಯಾಲಯಗಳ ತಪಾಸಣೆ ನಡೆಸುವ ಸಂಬಂಧ ಮಾನ್ಯ ಸಿಂಡಿಕೇಟ್ ಸದಸ್ಯರಗಳ ಅಧ್ಯಕ್ಷತೆಯಲ್ಲಿ ಅಧಿಸೂಚನೆ ಸಂಖ್ಯೆ: ತುವಿ:ಕಾ.ಅ.ಪ:ಪ.ಸ:2024-25/1369, ದಿನಾಂಕ: 29.06.2024 ಮತ್ತು ಅಧಿಸೂಚನೆ ಸಂಖ್ಯೆ: ತುವಿ:ಕಾ.ಅ.ಪ:ಪ.ಸ:2024-25/1370, ದಿನಾಂಕ: 29.06.2024, ರಲ್ಲಿ ಎರಡು ಪ್ರತ್ಯೇಕ ಸಮಿತಿಗಳನ್ನು ರಚಿಸಿ ಅಧಿಸೂಚನೆ ಹೊರಡಿಸಲಾಗಿತ್ತು.

ಸದರಿ ಎರಡು ಸಮಿತಿಗಳು ದಿನಾಂಕ: 15.07.2024 ಮತ್ತು 16.07.2024 ರಂದು ಹಾಗೂ ದಿನಾಂಕ: 16.07.2024 ಮತ್ತು 18.07.2024 ರಂದು ಬಿ.ಇಡಿ. ಶಿಕ್ಷಣ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಮಾನ್ಯ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸಿದ್ದು, ಸದರಿ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.